ವಿದ್ಯೆಗಳ ಮೂಲಗುರಿ ನಮ್ಮ ಜೀವನವನ್ನು ಸಾರ್ಥಕತೆಯತ್ತ ನಡೆಸಿಕೊಂಡು ಹೋಗುವುದೇ ಆಗಿರತಕ್ಕದ್ದು. ದಾರ್ಶನಿಕ ಆನಂದ ಕುಮಾರಸ್ವಾಮಿಯವರ ಮಾತೊಂದು ಮನನೀಯವಾದುದು:

**The study of any subject can live only to extent that the student himself stands or fails by the light of the subject studied.**

'ವಿದ್ಯಾರ್ಥಿಯೊಬ್ಬ ತಾನು ಕಲಿತ ವಿದ್ಯೆಯ ಬೆಳಕಿನಲ್ಲಿ ತನ್ನ ಜೀವನವನ್ನು ಎಷ್ಟರ ಮಟ್ಟಿಗೆ ಎದ್ದುನಿಲ್ಲಿಸಿಕೊಂಡಿದ್ದಾನೆಂಬುದೇ ಆ ವಿದ್ಯೆಯ ದಿಟವಾದ ಬಾಳಿಕೆಗೆ ಮಾನದಂಡವಾಗುವಂಥದ್ದು.' ಇದು ಈ ಮಾತಿನ ಸಾರಾಂಶ. ಎಂದರೆ ನಾವು ಕಲಿತ ವಿದ್ಯೆ ನಮ್ಮ ಜೀವನಕ್ಕೆ ಒದಗಬೇಕು. ಇದು ನಾವು ಕಲಿಯುವ ವಿದ್ಯೆಯ ಆಶಯವಾಗಿರಬೇಕು. ಹಸಿವಾದಾಗ ಮೀನನ್ನು ತಿಂದೆ; ಹಾಗಾಗಿ ಅದು ನನ್ನ ಜೀವನವನ್ನು ಉಳಿಸಿತು – ಎನ್ನುವುದು ಚಮತ್ಕಾರದ ಮಾತಲ್ಲ; ಅದು ದರ್ಶನದ ಮಾತು. 'ಮೀನು' ಎಂದರೆ ಇಲ್ಲಿ 'ವಿದ್ಯೆ'. ಅದು ನನ್ನ ಹಸಿವನ್ನು ದೂರ ಮಾಡಿತು – ಎಂದರೆ, ಆ ವಿದ್ಯೆ ನನಗೆ ಬದುಕನ್ನು ಕಟ್ಟಿಕೊಡುತ್ತಿದೆ; ವ್ಯಕ್ತಿತ್ವವನ್ನು ಒದಗಿಸುತ್ತಿದೆ; ನನಗೆ ಏನು ಬೇಕು–ಬೇಡ ಎನ್ನುವುದನ್ನು ಕಲಿಸುತ್ತಿದೆ – ಎಂದು ತಾತ್ಪರ್ಯ. ನಮ್ಮ ನಿತ್ಯದ ಜೀವನ ಚೆನ್ನಾಗಿ ಅರ್ಥವಾದಾಗ ಮಾತ್ರವೇ ನಮಗೆ ಅಧ್ಯಾತ್ಮ ಎಂದರೇನು ಎಂದು ಅರ್ಥವಾಗುವುದು. ಬೌದ್ಧದಾರ್ಶನಿಕ ನಾಗಾರ್ಜುನ ಈ ವಿಷಯವಾಗಿ ಹೇಳಿರುವ ಮಾತುಗಳು ಇಲ್ಲಿ ಉಲ್ಲೇಖಾರ್ಹವಾಗಿವೆ:

ನ ಸಂಸಾರಸ್ಯ ನಿರ್ವಾಣಾತ್ ಕಿಂಚಿದಸ್ತಿ ವಿಶೇಷಣಂ ।
ನ ನಿರ್ವಾಣಸ್ಯ ಸಂಸಾರಾತ್ ಕಿಂಚಿದಸ್ತಿ ವಿಶೇಷಣಂ ॥
ನಿರ್ವಾಣಸ್ಯ ಚ ಯಾ ಕೋಟಿಃ ಕೋಟಿಃ ಸಂಸರಣಸ್ಯ ಚ ।
ನ ತಯೋರಂತರಂ ಕಿಂಚಿತ್ ಸುಸೂಕ್ಷ್ಮಮಪಿ ವಿದ್ಯತೇ ॥

'ಸಂಸಾರಕ್ಕೂ ನಿರ್ವಾಣಕ್ಕೂ ವ್ಯತ್ಯಾಸವೇನಿಲ್ಲ; ಹಾಗೆಯೇ, ನಿರ್ವಾಣಕ್ಕೂ ಸಂಸಾರಕ್ಕೂ ವ್ಯತ್ಯಾಸವೇನಿರದು. ನಿರ್ವಾಣಕ್ಕೆ ಎಲ್ಲೆಯಾಗಿರುವುದು ಸಂಸಾರಕ್ಕೂ ಎಲ್ಲೆಯೇ; ಎರಡಕ್ಕೂ ವ್ಯತ್ಯಾಸವೇನಿರದು.' ಇದು ನಾಗಾರ್ಜುನನ ಮಾತುಗಳ ಭಾವ.

ಯಾರೋ ಹೇಳಿದ ಮಾತುಗಳಿಂದ ನಮ್ಮ ಜೀವನವನ್ನು ನಾವು ಸಂಕುಚಿತ ಮಾಡಿಕೊಳ್ಳುತ್ತಿರುತ್ತೇವೆ. ಅಧ್ಯಾತ್ಮದ ಸಂದರ್ಭದಲ್ಲಂತೂ ಈ ಮಾನಸಿಕತೆ ಹೆಚ್ಚು. ಹೀಗಾಗಿಯೇ ಅಧ್ಯಾತ್ಮ ಎನ್ನುವುದು ಜೀವನವನ್ನು ನೋಡುವ ಸಹಜದೃಷ್ಟಿ ಎಂದು ತಿಳಿದುಕೊಳ್ಳದೆ, 'ಅದು ಇದೇ', 'ಅದು ಹೀಗೇ' – ಎಂಬ ಪೂರ್ವಗ್ರಹವನ್ನು ಬೆಳೆಸಿಕೊಂಡು ನರಳುತ್ತೇವೆ. ಆ ಗುಹಾಗುರುವಿನ ಇಂಥ ಪೂರ್ವಗ್ರಹವನ್ನು ಮುಲ್ಲಾ ತುಂಬ ಜಾಣ್ಮೆಯಿಂದ ನಿವಾರಿಸಿದ. **'The primary cause of disorder in ourselves is the seeking of reality provided by another; we mechanically follow somebody who will assure us a comfortable spiritual life'** ಎಂದಿದ್ದಾರೆ, ದಾರ್ಶನಿಕ ಜೆ. ಕೃಷ್ಣಮೂರ್ತಿ. ಹೌದು, ಬೇರೆಯವರು ತೋರಿದ ದಾರಿಯಲ್ಲಿ ಪಯಣಿಸುವಂಥ ಎರವಲು ಸುಖವನ್ನೇ ನಾವು ಅಧ್ಯಾತ್ಮ ಎಂದು ಭಾವಿಸಿಕೊಂಡಿದ್ದೇವೆ; ಅರಿವು ಎಂದು ತಿಳಿದುಕೊಂಡಿದ್ದೇವೆ. ಆದರೆ ಅಧ್ಯಾತ್ಮ ಎನ್ನುವುದು, ನಮ್ಮ ಹಸಿವಿಗೆ ನಾವೇ ಅನ್ನ ತಿನ್ನುವಂಥದ್ದು; ಹಾಗೆ ತಿಂದ ಅನ್ನವನ್ನು ಜೀರ್ಣಿಸಿಕೊಳ್ಳಬೇಕಾದವರೂ ನಾವೇ ಹೌದೆನ್ನಿ!

✿